ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಾ.ಶಾ.ಪ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 21/07/20

# ದಿಲ್ಲಿ ಮಾಜಿ ಸಿಎಂ ಶೀಲಾ ದೀಕ್ಷಿತ್ ಇನ್ನಿಲ್ಲ

ಹೊಸದಿಲ್ಲಿ: 1998ರಿಂದ 2013ರವರೆಗೆ ಮೂರು ಅವಧಿಗೆ ದಿಲ್ಲಿ ಮುಖ್ಯಮಂತ್ರಿಯಾಗಿದ್ದು, ರಾಷ್ಟ್ರ ರಾಜಧಾನಿಗೆ ಆಧುನಿಕ ರೂಪ ನೀಡುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ಕಾಂಗ್ರೆಸ್ ನಾಯಕಿ ಶೀಲಾ ದೀಕ್ಷಿತ್ (81) ಇನ್ನಿಲ್ಲ.

ಶನಿವಾರ ಮುಂಜಾನೆ ಹೃದಯಾಘಾತಕ್ಕೆ ಒಳಗಾಗಿ ದಿಲ್ಲಿಯ ಫೋರ್ಟಿಸ್ ಆಸ್ಪತ್ರೆಗೆ ದಾಖಲಾಗಿದ್ದ ಅವರು ಮಧ್ಯಭಾಗದಲ್ಲಿ ಒಮ್ಮೆ ಸ್ವಲ್ಪ ಚೇತರಿಸಿಕೊಂಡಿದ್ದರು. ಆದರೆ, ಎರಡನೇ ಬಾರಿ ಹೃದಯ ಆಘಾತ ಎದುರಿಸಿ ಮಧ್ಯಾಹ್ನ 3.55ಕ್ಕೆ ಕೊನೆಯುಸಿರೆಳೆದರು ಎಂದು ವೈದ್ಯರು ತಿಳಿಸಿದ್ದಾರೆ.

ಮಾಜಿ ಕೇಂದ್ರ ಸಚಿವ, ಉತ್ತರ ಪ್ರದೇಶದ ಪ್ರಬಲ ಕಾಂಗ್ರೆಸ್ ನಾಯಕ ಉಮಾಶಂಕರ್ ದೀಕ್ಷಿತ್ ಅವರ ಸೊಸೆ ಶೀಲಾ ದೀಕ್ಷಿತ್ ಅವರ ಸಕ್ರಿಯ ರಾಜಕೀಯ ಬದುಕು 1934ರಿಂದ ಆರಂಭಗೊಂಡಿತ್ತು. ಉತ್ತಮ ಆಡಳಿತಪಟುವಾಗಿ ಗಮನ ಸೆಳೆದಿದ್ದ ಶೀಲಾ ಎಲ್ಲ ರಾಜಕೀಯ ಪಕ್ಷಗಳ ಜತೆ ಉತ್ತಮ ಸಂಬಂಧ ಹೊಂದಿದ್ದರು. ಕಾಂಗ್ರೆಸ್‌ನಲ್ಲಂತೂ ಎಲ್ಲರ ಗೌರವಕ್ಕೆ ಪಾತ್ರರಾಗಿದ್ದರು. ಪ್ರಸಕ್ತ ದಿಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಅವರು ಮುಂದಿನ ಚುನಾವಣೆಗೆ ಪಕ್ಷವನ್ನು ಸಿದ್ಧಗೊಳಿಸುವ ಮಹತ್ವದ ಜವಾಬ್ದಾರಿ ಹೊತ್ತಿದ್ದರು.

ರಾಷ್ಟ್ರಪತಿ ರಾಮನಾಥ್ ಕೋವಿಂದ್, ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಸೇರಿದಂತೆ ಹಲವಾರು ಗಣ್ಯರು ಶೀಲಾ ದೀಕ್ಷಿತ್ ನಿಧನಕ್ಕೆ ಕಂಬನಿ ಮಿಡಿದಿದ್ದಾರೆ.



**ಪ್ರಮುಖ ಘಟ್ಟಗಳು**

- ಜನನ: ಮಾ.31, 1938
- ಶಿಕ್ಷಣ: ಎಂಎ, ಇತಿಹಾಸ
- 1984ರಲ್ಲಿ ಉತ್ತರ ಪ್ರದೇಶದ ಕನೌಜ್ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆ
- 1984-89: ರಾಜೀವ್ ಗಾಂಧಿ ಸಂಪುಟದಲ್ಲಿ ಸಂಸದೀಯ ವ್ಯವಹಾರ ಸಚಿವೆ
- 1998-2013: ದಿಲ್ಲಿ ಸಿಎಂ
- 2014: 5 ತಿಂಗಳು ಕೇರಳ ರಾಜ್ಯಪಾಲರು
- 2019: ದಿಲ್ಲಿ ಕಾಂಗ್ರೆಸ್ ಮುಖ್ಯಸ್ಥೆ
- ಮಕ್ಕಳು: ಮಾಜಿ ಸಂಸದ ಸಂದೀಪ್ ದೀಕ್ಷಿತ್, ಲತಿಕಾ ಸಯೀದ್

**ಇಂದು ಅಂತ್ಯಕ್ರಿಯೆ**

ಶೀಲಾ ದೀಕ್ಷಿತ್ ಅವರ ಪಾರ್ಥಿವ ಶರೀರವನ್ನು ನಿಜಾಮುದ್ದೀನ್ ಪೂರ್ವದಲ್ಲಿರುವ ಅವರ ಮನೆಯಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿದ್ದು, ಭಾನುವಾರ ನಿಗಾಂಬೋಧ್ ಘಾಟ್‌ನಲ್ಲಿ ಅಂತ್ಯಸಂಸ್ಕಾರ ನಡೆಸಲಾಗುತ್ತದೆ ಎಂದು ದಿಲ್ಲಿ ಕಾಂಗ್ರೆಸ್ ತಿಳಿಸಿದೆ.

ಶೀಲಾ ದೀಕ್ಷಿತ್‌ಜಿ ಅವರ ನಿಧನದಿಂದ ತುಂಬ ನೋವಾಗಿದೆ. ವಿನಯಶೀಲ ಮತ್ತು ಸಹೃದಯ ವ್ಯಕ್ತಿತ್ವ ಹೊಂದಿದ್ದ ಅವರು ದಿಲ್ಲಿಯ ಅಭಿವೃದ್ಧಿಗೆ ಅಮೂಲ್ಯ ಕೊಡುಗೆ ನೀಡಿದ್ದಾರೆ.

-**ನರೇಂದ್ರ ಮೋದಿ** ಪ್ರಧಾನಿ

ಕಾಂಗ್ರೆಸ್ ಪಕ್ಷದ ಪ್ರೀತಿಯ ಮಗಳು ಅವರು. ನಾನು ಅವರೊಂದಿಗೆ ಅತ್ಯಂತ ಆತ್ಮೀಯ ಸಂಬಂಧವನ್ನು ಹೊಂದಿದ್ದೆ. ನಿಸ್ವಾರ್ಥವಾಗಿ ಮೂರು ಅವಧಿಗೆ ದಿಲ್ಲಿಯನ್ನು ಆಳಿದವರು ಅವರು.

-**ರಾಹುಲ್ ಗಾಂಧಿ** ಕಾಂಗ್ರೆಸ್ ನಾಯಕ

ಅವರ ಸಾವು ದಿಲ್ಲಿಗೆ ದೊಡ್ಡ ನಷ್ಟ. ಅವರ ಕೊಡುಗೆಯನ್ನು ರಾಜಧಾನಿ ಸದಾ ಕಾಲ ನೆನಪಿಸಿಕೊಳ್ಳುತ್ತದೆ.

-**ಅರವಿಂದ ಕೇಜ್ರಿವಾಲ್** ದಿಲ್ಲಿ ಸಿಎಂ

[illegible] 4